**DISTRICT LEGAL SERVICES AUTHORITY, VIJAYAPURA**
**District Court Complex, Bagalkot Road- 586109.**
**Ph No. 08352-276150, Email dlsavijayapura1@gmail.com**

## ಅಧಿಸೂಚನೆ

ಅರೆಕಾಲಿಕ ಸ್ವಯಂ ಸೇವಕರ ಆಯ್ಕೆ ಅಧಿಸೂಚನೆ

ಸಂಖ್ಯೆ: **DLSA/PLV/Selection 6/2024, dated: 19.07.2024**

ವಿಜಯಪೂರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಜೊತೆ ಸೇವೆ ಸಲ್ಲಿಸಲು ಅರೆ-ಕಾಲಿಕ ಸ್ವಯಂ ಸೇವಕರ ಆಯ್ಕೆಗೆ ಅರ್ಜಿ ಆಹ್ವಾನಿಸಿ ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಅರ್ಜಿಯನ್ನು ಶಿಕ್ಷಕರು (ನಿವೃತ್ತರೂ ಸೇರಿ), ನಿವೃತ್ತ ಕೇಂದ್ರ ಅಥವಾ ರಾಜ್ಯ ಸರ್ಕಾರಿ ನೌಕರರು, ಹಿರಿಯ ನಾಗರಿಕರು, ಎಂ.ಎಸ್.ಡಬ್ಲ್ಯೂ ವಿದ್ಯಾರ್ಥಿ/ನಿಯರು ಹಾಗೂ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ವೈದ್ಯರು, ಪದವಿ ಓದುತ್ತಿರುವ ಹಾಗೂ ಕಾನೂನು ಪದವಿ ವಿದ್ಯಾರ್ಥಿ/ನಿಯರು, ರಾಜಕೀಯ ಪಕ್ಷಕ್ಕೆ ಸಂಬಂಧಪಡದ ಹಾಗೂ ಸೇವಾ ಮನೋಭಾವ ಹೊಂದಿರುವ ಸಂಘ ಸಂಸ್ಥೆಗಳು, ಸ್ತ್ರೀ ಶಕ್ತಿ ಸಂಘ, ಮೈತ್ರಿ ಸಂಘ ಹಾಗೂ ಸ್ವ-ಸಹಾಯ ಸಂಘಗಳ ಸದ್ಯಸರು ಹಾಗೂ ದೀರ್ಘಕಾಲೀನ ಕಾರಾಗೃಹ ಶಿಕ್ಷೆಗೊಳಗಾಗಿರುವ ಸನ್ನಡತೆಯ ಖೈದಿಗಳು ಇವರುಗಳು ಅರ್ಜಿ ಸಲ್ಲಿಸಬಹುದಾಗಿದೆ.

ಆಯ್ಕೆಯ ವಿಧಾನ:

ಅರೆಕಾಲಿಕ ಸ್ವಯಂ ಸೇವಕರ ಆಯ್ಕೆಯನ್ನು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವಿಜಯಪೂರ ಮುಖ್ಯಸ್ಥರಾಗಿರುವ ಆಯ್ಕೆ ಸಮಿತಿಯು ಆಯ್ಕೆ ಮಾಡುತ್ತದೆ.

ಅರ್ಹತೆ:

- **a.** ಅಭ್ಯರ್ಥಿಯು ಪ್ರಾಪ್ತ ವಯಸ್ಕರಾಗಿರಬೇಕು.
- **b.** ಅಭ್ಯರ್ಥಿಯು ಯಾವುದೇ ಅಪರಾಧಿಕ ಪ್ರಕರಣಗಳಲ್ಲಿ ಭಾಗಿಯಾಗಿರತಕ್ಕದ್ದಲ್ಲ.
- **c.** ಅಭ್ಯರ್ಥಿಯು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರತಕ್ಕದ್ದಲ್ಲ.
- **d.** ಅಭ್ಯರ್ಥಿಯು ಶೋಷಿತರ ಹಾಗೂ ದಮನಿತ ಪರ ಸೇವಾ ಮನೋಭಾವನೆ ಹೊಂದಿರತಕ್ಕದ್ದು.
- **e.** ಅಭ್ಯರ್ಥಿಯು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಾವಳಿಗಳಿಗೆ ಬದ್ಧನಾಗಿರತಕ್ಕದ್ದು.

Contd....2

**: ಅಭ್ಯರ್ಥಿಗಳು ಪಾಲಿಸಬೇಕಾದ ಸಾಮಾನ್ಯ ನಿಯಮಗಳು :**

1. ಅರೆಕಾಲಿಕ ಸ್ವಯಂ ಸೇವಕರಾಗಿ ಇಚ್ಛಿಸುವ ಅಭ್ಯರ್ಥಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಛೇರಿ ವಿಜಯಪೂರ ಇವರಿಂದ ಅಥವಾ ವಿಜಯಪೂರ ಜಿಲ್ಲಾ ನ್ಯಾಯಾಲಯಗಳ ಅಧೀಕೃತ ಸಾಮಾಜಿಕ ಜಾಲತಾಣದ ಮೂಲಕ ಅರ್ಜಿಯನ್ನು ಪಡೆಯಬಹುದು.

2. ಸದರಿ ಅರ್ಜಿಯನ್ನು ದಿನಾಂಕ: **03.08.2024** ರ ಒಳಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿ, ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಬಾಗಲಕೋಟ ರಸ್ತೆ, ವಿಜಯಪೂರ ರವರಿಗೆ ಸಲ್ಲಿಸತಕ್ಕದ್ದು.

3. ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ವಾಸಸ್ಥಳ ದೃಢೀಕರಣ ಹಾಗೂ ಇತ್ತೀಚಿನ ಪಾಸ್ಪೋರ್ಟ ಅಳತೆ ಎರಡು ಛಾಯಾಚಿತ್ರಗಳನ್ನು ಸಲ್ಲಿಸತಕ್ಕದ್ದು.

4. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ತಮ್ಮ ವಿಳಾಸ, ಮೊಬೈಲ್ ಸಂಖ್ಯೆ, ಹಾಗೂ e-mail ID ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು .

5. ಮಾನ್ಯ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವಿಜಯಪೂರ ರವರು ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿ ಅಂತಿಮವಾಗಿರುತ್ತದೆ.

6. ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿ ಸಂದರ್ಶನಕ್ಕಾಗಿ ನಿಗದಿತ ಸ್ಥಳ, ದಿನಾಂಕ ಮತ್ತು ಸಮಯವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸೂಚನಾ ಫಲಕಕ್ಕೆ ಹಾಗೂ ವಿಜಯಪೂರ ಜಿಲ್ಲಾ ನ್ಯಾಯಾಲಯದ ಅಧಿಕೃತ ವೆಬ್‌ಸೈಟನಲ್ಲಿ ಪ್ರಕಟಿಸಲಾಗುವುದು.

7. ಅರೆಕಾಲಿಕ ಸ್ವಯಂ ಸೇವಕರ ಆಯ್ಕೆಯನ್ನು ಅವರ ಅರ್ಹತೆ ಹಾಗೂ ಆಯ್ಕೆ ಸಮಿತಿಯ ಸಂತೃಪ್ತಿಯ ಆಧಾರದ ಮೇರೆಗೆ ಮಾಡಲಾಗುವುದು.

8. ಅರೆಕಾಲಿಕ ಸ್ವಯಂ ಸೇವಕರಾಗಿ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಬ್ಯಾಂಕ ಖಾತೆಯ ಪಾಸ್ ಪುಸ್ತಕನ ಮೊದಲ ಪುಟದ ಝುರಾಕ್ಸ ಪ್ರತಿಯನ್ನು ಸಲ್ಲಿಸತಕ್ಕದ್ದು.

9. ಅರೆಕಾಲಿಕ ಸ್ವಯಂ ಸೇವಕರಾಗಿ ಆಯ್ಕೆಯಾದವರ ಕಾರ್ಯ ವೈಖರಿ ಪ್ರಾಧಿಕಾರಕ್ಕೆ ಸಂತೃಪ್ತವಾಗದಿದ್ದರೆ ಅಥವಾ ಅರೆಕಾಲಿಕ ಸ್ವಯಂ ಸೇವಕರಾಗಿ ಆಯ್ಕೆಯಾದ ಅಭ್ಯರ್ಥಿ ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಾವಳಿಗಳಿಗೆ ವಿರುದ್ಧವಾಗಿ ನಡೆದುಕೊಂಡರೆ, ಅವರ ಅರೆಕಾಲಿಕ ಸ್ವಯಂ ಸೇವಕ ಆಯ್ಕೆಯನ್ನು ಯಾವುದೇ ನೋಟಿಸ್ ನೀಡದೆ ತೆಗೆದುಹಾಕಲಾಗುವುದು.

10. ಆಯ್ಕೆಯಾದ ಅರೆಕಾಲಿಕ ಸ್ವಯಂ ಸೇವಕ ತಾನು ಸೇವೆ ಸಲ್ಲಿಸಿದ ವ್ಯಕ್ತಿಯಿಂದ ಶುಲ್ಕ, ಯಾವುದೇ ರೀತಿ ಹಣ ಅಥವಾ ಬೆಲೆ ಬಾಳುವ ಉಡುಗರೆ ಅಥವಾ ಇನ್ನಿತರ ಯಾವುದೇ ಪ್ರತಿಫಲಗಳನ್ನು ಪಡೆದುಕೊಂಡರೆ, ಅವರ ಅರೆಕಾಲಿಕ ಸ್ವಯಂ ಸೇವಕ ಆಯ್ಕೆಯನ್ನು ಯಾವುದೇ ನೋಟಿಸ್ ನೀಡದೆ ಅನರ್ಹಗೊಳಿಸಲಾಗುವುದು.

11. ಅರೆಕಾಲಿಕ ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸುವ ಅವಧಿ ಒಂದು ವರ್ಷಕ್ಕೆ ಅಥವಾ ಪ್ರಾಧಿಕಾರದ ಮುಂದಿನ ಆದೇಶದವರೆಗೆ ಮಾತ್ರ ಸೀಮಿತವಾಗಿರುತ್ತದೆ.

12. ಅರೆಕಾಲಿಕ ಸ್ವಯಂ ಸೇವಕರಿಗೆ ಪ್ರಾಧಿಕಾರ ಸೂಚಿಸಿರುವ ಸೇವಾ ಕಾರ್ಯ ಮಾಡಿದಾಗ ನಿಯಮಾನುಸಾರ ಗೌರವಧನವನ್ನು ಚೆಕ್ ಅಥವಾ RTGS ಮುಖಾಂತರ ಪಾವತಿಸಲಾಗುವುದು.

**By the order of the Hon'ble Prl. District & Sessions Judge and Chairman, DLSA, Vijayapura.**

19/7/24

**(Mallikarjun Appasaheb Ambi @ Ambli)**
Prl. Senior Civil Judge & CJM and I/c Member Secretary
Dist. Legal Services Authority,
Vijayapura.

## ವಿಜಯಪುರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಲ್ಲಿ ಅರೆಕಾಲಿಕ ಸ್ವಯಂ ಸೇವಕರ **(Para Legal Volunteer)** ನೇಮಕಾತಿಗಾಗಿ ಅರ್ಜಿ

**ಗೆ,**

ಅಧ್ಯಕ್ಷರು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ,
ವಿಜಯಪುರ.

***Notification No. DLSA/PLV/Selection 6/2024, Dated: 19.07.2024***

| | | |
|---|---|---|
| 1. | ಅರ್ಜಿದಾರರ ಹೆಸರು | |
| 2. | ತಂದೆ / ತಾಯಿಯ ಹೆಸರು | |
| 3. | ಜನ್ಮ ದಿನಾಂಕ ಮತ್ತು ವಯಸ್ಸು | |
| 4. | ವಿಳಾಸ:<br>**a)** ಖಾಯಂ ವಿಳಾಸ:<br>**b)** ಕಛೇರಿ ವಿಳಾಸ : | |
| 5. | ದೂರವಾಣಿ / ಮೊಬೈಲ್ ಸಂಖ್ಯೆ | |
| 6. | **E-Mail** ವಿಳಾಸ: | |
| 7. | ವಿದ್ಯಾರ್ಹತೆ: | |
| 8. | ಸಮಾಜ ಸೇವೆಯ ಅನುಭವ : | |
| 9 | ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ ಸರ್ಕಾರಿ/ಅರೆಸರ್ಕಾರಿ/ಸ್ವಯಂ ಸೇವಾ ಸಂಘ-ಸಂಸ್ಥೆಗಳು/ಮಹಿಳಾ ಸ್ವ-ಸಹಾಯ ಸಂಘಗಳು ಕುರಿತಾದ ಸಂಪೂರ್ಣ ಮಾಹಿತಿ | |
| 10. | ಈಗಾಗಲೇ ಅರೆಕಾಲಿಕ ಸ್ವಯಂ ಸೇವಕರಾಗಿ ಜಿ.ಕಾ.ಸೇಪ್ರಾ/ ತಾ.ಕಾ.ಸೇ.ಸಮಿತಿಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಇದೆ /ಇಲ್ಲ | |
| 11. | ಜಾತಿ (ಪ.ಜಾ/ಪ.ಪಂ ಕ್ಕೆ ಸೇರಿದ್ದಲ್ಲಿ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸುವುದು) | |
| 12. | ಭಾಷೆಗಳು: ಓದಲು ಹಾಗೂ ಬರೆಯಲು ಗೊತ್ತಿರುವ ಭಾಷೆಗಳು | |
| 13. | ಇತರೆ ವಿಶೇಷ ಮಾಹಿತಿ | |

ನಾನು ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳನ್ನು ತಿಳಿದಿದ್ದು, ಸೇವಾ ಮನೋಭಾವನೆಯಿಮದ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ.

ಸ್ಥಳ :
ದಿನಾಂಕ:

ಅರ್ಜಿದಾರರ ಸಹಿ/-